**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 16-09-2023.**

**ಪಾಟೀ ಸವಾಲು - ವಾದಿ ಪರ ವಕೀಲರಿಂದ :**

**1)** ನಾನು ಈಗ ಯಲಹಂಕಾದಲ್ಲಿ ವಾಸವಾಗಿದ್ದೇನೆ. ಸುಮಾರು 18-20 ವರ್ಷದಿಂದ ಯಲಹಂಕದಲ್ಲಿ ವಾಸವಿರುತ್ತೇನೆ. ನಾನು ನಿವೃತ್ತ ಬ್ಯಾಂಕ್ ಮ್ಯಾನೇಜರ್. ವಾದಿ ಈ ದಾವೆಯನ್ನು ಯಾವ ಕಾರಣಕ್ಕೆ ಹಾಕಿದ್ದಾರೆ ಎಂದು ನನಗೆ ಗೊತ್ತು. ಸರ್ವೆ ಸಂಖ್ಯೆ 131-16 ರ ಬಗ್ಗೆ ದಾವೆ ದಾಖಲಿಸಿರುತ್ತಾರೆ. ದಾವಾ ಸ್ವತ್ತಿನ ವಿಸ್ತೀರ್ಣ 2 ಎಕರೆ. ದಾವಾ ಸ್ವತ್ತು ಮೂಲತಃ ವಾದಿಯ ತಂದೆಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಸದರಿ ಮುನಿಶಾಮಪ್ಪ ಅವರ ವಿರುದ್ಧ ಅವರ ತಮ್ಮ ನಾರಾಯಣಪ್ಪ ಅಸಲು ದಾವಾ ಸಂಖ್ಯೆ 512-2007 ನ್ನು ಪಾಲು ಕೇಳಿ ಇದೇ ನ್ಯಾಯಾಲಯದ ಎದುರು ದಾಖಲಿಸಿದ್ದರು ಎಂದರೆ ಈ ದಾವೆ ದಾಖಲಿಸಿದ ನಂತರ ಅದರ ಬಗ್ಗೆ ತಿಳಿದುಕೊಂಡಿರುತ್ತೇನೆ. ಸದರಿ ದಾವೆಯಲ್ಲಿ ಈ ದಾವಾ ಸ್ವತ್ತು ಐಟಂ ಸಂಖ್ಯೆ 10 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಏನು ಆಗಿದೆ ಎಂದು ನನಗೆ ಗೊತ್ತಿಲ್ಲ. ದಿ.08-12-2009 ರಂದು ಸದರಿ ದಾವೆ ವಾದಿಯ ತಂದೆಯ ಪರವಾಗಿ ತೀರ್ಮಾನ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಸದರಿ ದಾವೆಯ ಬಗ್ಗೆ ತಿಳಿದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಸದರಿ ಮನಿಶಾಮಪ್ಪ ಅವರು ವಾದಿಗೆ ದಿ.30-10-2006 ರಂದು ಒಂದು ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರ ಪ್ರಕಾರ ವಾದಿಯ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಈವತ್ತಿಗೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅವರು ದಾವಾ ಸ್ವತ್ತಿನಲ್ಲಿ ಮಲಬರಿ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.4 ರಲ್ಲಿ ತೋರಿಸಿದ ಸ್ವತ್ತು ನನಗೆ ಸರ್ಕಾರದಿಂದ ಮಂಜೂರು ಆಗಿರುತ್ತದೆ. ಸದರಿ ಮಂಜೂರಾತಿ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಮಂಜೂರಾತಿ ಆದೇಶ ನಿ.ಡಿ.2 ಆಗಿರುತ್ತದೆ. ನಿ.ಡಿ.2 ಮಂಜೂರಾತಿ ಪತ್ರ ಅಲ್ಲ, ತಹಶೀಲ್ದಾರ್ ಅವರ ಆದೇಶದ ಪ್ರತಿ

ಎಂದರೆ ತಹಶೀಲ್ದಾರ್ ಅವರ ಆದೇಶದ ಪ್ರಕಾರ ಮಂಜೂರಾತಿ ಆಗಿರುತ್ತದೆ ಎಂದು ನುಡಿಯುತ್ತೇನೆ. 2015 ರಲ್ಲಿ ನನಗೆ ದಾವಾ ಸ್ವತ್ತು ಮಂಜೂರು ಆಗಿರುತ್ತದೆ. ನಿ.ಡಿ.2 ರಲ್ಲಿ 2015 ರಲ್ಲಿ ಮಂಜೂರು ಆಗಿರುವ ಬಗ್ಗೆ ನಮೂದು ಇದೆ. ಸದರಿ ಅದೇಶದಲ್ಲಿ ಸರ್ಕಾರಿ ಪಡಕ್ಕೆ ಇದ್ದ ಆಸ್ತಿ ಎಂದು ನಮೂದು ಇದೆ. ಸದರಿ ಆಸ್ತಿಯನ್ನು ಮಂಜೂರು ಮಾಡಿ ಎಂದು ನಾನು ಅರ್ಜಿ ಸಲ್ಲಿಸಿರುತ್ತೇನೆ. 2015-16 ರಲ್ಲಿ ಅರ್ಜಿ ಸಲ್ಲಿಸಿರುತ್ತೇನೆ. 2016 ನೇ ಇಸವಿಯವರೆಗೂ ದಾವಾ ಆಸ್ತಿಯ ದಾಖಲೆಗಳು ನನ್ನ ಹೆಸರಿನಲ್ಲೇ ಬರುತ್ತಿದ್ದವು. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿಯ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 2015-16 ನೇ ಇಸವಿಯ ಪಹಣಿ ಪತ್ರಿಕೆಯ ಹೊರತಾಗಿ ಬೇರೆ ಪಹಣಿ ಪತ್ರಿಕೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಕಂದಾಯ ಇಲಾಖೆಯ ಜೊತೆ ಶಾಮೀಲಾಗಿ ಪಹಣಿ ಮಾಡಿಸಿಕೊಂಡು 2015-16 ರಲ್ಲಿ ವಾದಿಯ ಸ್ವಾಧೀನಕ್ಕೆ ತೊಂದರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ಹಿಂದೆಯೂ ದಾವಾ ಸ್ವತ್ತಿನ ಬಗ್ಗೆ ಕಂದಾಯ ಪಾವತಿಸಿರುತ್ತೇನೆ. ಸದರಿ ಕಂದಾಯ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ರೀತಿ ಕಟ್ಟಿದ್ದೇ ಆದರೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ತೋರಿಸಲು ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಿದರೆ ನನ್ನ ತಕರಾರು ಇಲ್ಲ.

**ವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**